

ಕೆಡುತ್ತದೆ. ಶ್ರವಣೋಪಕರಣವನ್ನು ಆಫ್ ಮಾಡಿ, ಬ್ಯಾಟರಿ ತೆಗೆದು, ಬ್ಯಾಟರಿ ಇಡುವ ಸ್ಥಳವನ್ನು ತೆರೆದಿಡಿ. ತಕ್ಷಣವೆ ಮೆತ್ತಗಿನ ಒಣಗಿದ ಬಟ್ಟೆಯಲ್ಲಿ ಶ್ರವಣೋಪಕರಣವನ್ನು ಚೆನ್ನಾಗಿ ಒರೆಸಿ ಒಣಗಿಸಿ.

ನಿಮ್ಮಲ್ಲಿ ಯಾವುದೇ ಪ್ರಶ್ನೆಗಳು/ ಸಲಹೆಗಳಿದ್ದಲ್ಲಿ ಅಥವಾ ಯಾವುದೇ ಸಹಕಾರ ಬೇಕಿದ್ದಲ್ಲಿ ನಮ್ಮನ್ನು ಸಂಪರ್ಕಿಸಿ.


**ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ**

ಮಾನಸಗಂಗೋತ್ರಿ, ಮೈಸೂರು 570 006

**ದೂರವಾಣಿ :** 0821 2514449 / 2514618

**ಫ್ಯಾಕ್ಸ್ :** 0821 2510515

**ಇ ಮೇಲ್ :** aiish_dir@yahoo.com


**ಕೆಲಸದ ವೇಳೆ :** ಬೆಳಗ್ಗೆ 9-00 ರಿಂದ ಸಂಜೆ 5-30 ರವರೆಗೆ

ಸೋಮವಾರದಿಂದ - ಶುಕ್ರವಾರದವರೆಗೆ

(ಕೇಂದ್ರ ಸರ್ಕಾರದ ರಜಾ ದಿನಗಳನ್ನು ಹೊರತುಪಡಿಸಿ)



ನಿಮ್ಮ ಶ್ರವಣೋಪಕರಣವನ್ನು ರಕ್ಷಿಸುವ ಬಗ್ಗೆ

# ಮಾಡಿ ಮತ್ತು ಮಾಡಬೇಡಿ


**ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ**

ಮಾನಸಗಂಗೋತ್ರಿ, ಮೈಸೂರು - 570 006

## ನಿಮ್ಮ ಶ್ರವಣೋಪಕರಣವನ್ನು ರಕ್ಷಿಸುವ ಬಗ್ಗೆ ಮಾಡಿ ಮತ್ತು ಮಾಡಬೇಡಿ

### ಮಾಡಿ

1. ಶ್ರವಣೋಪಕರಣವನ್ನು ಸ್ವಚ್ಛವಾಗಿ ಹಾಗು ತೇವವಿಲ್ಲದ ಹಾಗೆ ಇಟ್ಟುಕೊಳ್ಳಿ. ಶ್ರವಣೋಪಕರಣವನ್ನು ಬಳಸದಿದದ್ದಾಗ ಶ್ರವಣೋಪಕರಣದ ಬ್ಯಾಟರಿ ಇಡುವ ಜಾಗವನ್ನು ತೆರೆದಿಡಬೇಕು. ನೀವು ಡಿಹುಮಿಡಿಫೈಯರ್ ಕೂಡ ಉಪಯೋಗಿಸಬಹುದು. ಡಿಹುಮಿಡಿಫೈಯರ್ ಒಂದು ಸಣ್ಣ ಪೆಟ್ಟಿಗೆ. ಅದರಲ್ಲಿ ಸಿಲಿಕಾ ಜೆಲ್‌ನ ಹರಳುಗಳು ಇರುತ್ತದೆ. ಇದು ತೇವಾಂಶವನ್ನು ಹೀರಿಕೊಂಡು ಶ್ರವಣಸಾಧನವನ್ನು ಒಣಗಿದ ಸ್ಥಿತಿಯಲ್ಲಿ ಇಡುತ್ತದೆ. ಶ್ರವಣೋಪಕರಣವನ್ನು ಡಿಹುಮಿಡಿಫೈಯರ್ ಒಳಗೆ ಇಡುವ ಮುನ್ನ ಬ್ಯಾಟರಿಯನ್ನು ಹೊರಗೆ ತೆಗೆದಿಡಲು ನೆನಪಿನಲ್ಲಿಡಿ. ಬ್ಯಾಟರಿಯನ್ನು ಡಿಹುಮಿಡಿಫೈಯರ್ ಒಳಗೆ ಇಡಬಾರದು. ಇದನ್ನು ಬಳಸುದರಿಂದ ಶ್ರವಣೋಪಕರಣದಲ್ಲಿ ತೇವಾಂಶವಿರುದಿಲ್ಲ. ಖಹುಮಿಡಿಫೈಯರ್  ಬಳಸುವ ಮುನ್ನ ಶ್ರವಣೋಪಕರಣದ ವಿದ್ಯುತ್ ಕೋಶವನ್ನು ತೆರೆದಿಡಬೇಕು.



2. ನಿಮ್ಮ ಶ್ರವಣೋಪಕರಣವನ್ನು ತಂಪಾದ ಮತ್ತು ಒಣಗಿದ ಸ್ಥಳದಲ್ಲಿಡಿ.
3. ನಿಮ್ಮ ಶ್ರವಣೋಪಕರಣವನ್ನು ಜೋಪಾನವಾಗಿ ನೋಡಿಕೊಳ್ಳಿ.
4. ನಿಮ್ಮ ಶ್ರವಣೋಪಕರಣಕ್ಕೆ ಉಪಯೋಗಿಸುವ ಬ್ಯಾಟರಿಯನ್ನು ನಿಯಮಿತವಾಗಿ ಬದಲಾವಣೆ ಮಾಡಿಕೊಳ್ಳಿ.
5. ನಿಮ್ಮ ಶ್ರವಣೋಪಕರಣವನ್ನು ವರ್ಷಕ್ಕೊಮ್ಮೆಯಾದರೂ ಸರ್ವಿಸಿಂಗ್ ಮಾಡಿಸಿ.
6. ನಿಮ್ಮ ಶ್ರವಣಶಕ್ತಿಯನ್ನು ವರ್ಷಕ್ಕೊಮ್ಮೆ ನಿಯಮಿತವಾಗಿ ಪರೀಕ್ಷಿಸಿಕೊಳ್ಳಿ.
7. ನಿಮ್ಮ ಶ್ರವಣ ತಜ್ಞರ ಸಂಪರ್ಕದಲ್ಲಿರಿ.



8. ನಿಮ್ಮ ಕಿವಿ ಅಚ್ಚನ್ನು ಅವಶ್ಯಕತೆಯಿರುವಾಗಲೆಲ್ಲಾ ಬದಲಾಯಿಸಿ.
9. ನಿಮ್ಮ ಕಿವಿಯನ್ನು ಸ್ವಚ್ಛವಾಗಿ ಇಟ್ಟುಕೊಳ್ಳಿ.
10. ನಿಮ್ಮ ಶ್ರವಣೋಪಕರಣವನ್ನು ಸ್ವಚ್ಛವಾದ ಮತ್ತು ಒಣಗಿದ ಕೈಯಿಂದ ಬಳಸಿ.
11. ನಿಮ್ಮ ಕಿವಿಯ ಅಚ್ಚನ್ನು ನಿಮ್ಮ ಕಿವಿಗೆ ಸರಿಯಾಗಿ ಹೊಂದಿಕೊಳ್ಳುವುದೆಂದು ಖಾತ್ರಿ ಮಾಡಿಕೊಳ್ಳಿ.
12. ನಿಮ್ಮ ಕಿವಿಯ ಅಚ್ಚನ್ನು ಬೇರ್ಪಡಿಸಿ ಎರಡು ಅಥವಾ ಮೂರು ದಿನಗಳಗೊಮ್ಮೆ ಬೆಚ್ಚಗಿರುವ ನೀರು ಹಾಗೂ ಸಾಬೂನು ಅಥವಾ ಶಾಂಪುವಿನಿಂದ ಸ್ವಚ್ಛಗೊಳಿಸಬೇಕು. ಚೆನ್ನಾಗಿ ಒಣಗಿದ ಮೇಲೆ ಬಳಸಬೇಕು.
13. ನಿಮ್ಮ ಇ ಎನ್ ಟಿ ವೈದ್ಯರನ್ನು ನಿಯಮಿತವಾಗಿ ಭೇಟಿಕೊಡಿ.
14. ನೀವು ಯಾವಗಲೂ ಹೊಸ ಶ್ರವಣೋಪಕರಣಗಳ ಮಾಡೆಲ್‌ಗಳ ಬಗ್ಗೆ, ಶ್ರವಣೋಪಕರಣದ ಬೆಲೆಯಲ್ಲಿ ಬದಲಾವಣೆ, ಸರ್ಕಾರಿ ಯೋಜನೆಗಳು ಮುಂತಾದ ವಿಷಯಗಳ ಬಗ್ಗೆ ಮಾಹಿತಿಯನ್ನು ತಿಳಿದುಕೊಳ್ಳುತ್ತಿರಬೇಕು.
15. ನಿಮಗೆ ಶ್ರವಣೋಪಕರಣದ ಬಗ್ಗೆ ಯಾವುದಾದರೂ ಪ್ರಶ್ನೆ ಅಥವಾ ಸಂದೇಹ ಇದ್ದಲ್ಲಿ ಅದನ್ನು ಒಂದು ಪುಸ್ತಕದಲ್ಲಿ ಬರೆದಿಟ್ಟುಕೊಳ್ಳಿ.
16. ಹಾಗೆಯೇ ನೀವು ಉಪಯೋಗಿಸುತ್ತಿರುವ ಶ್ರವಣೋಪಕರಣದ ಹೆಸರು, ಮಾಡೆಲ್ ಮತ್ತು ಸೀರಿಯಲ್ ನಂಬರ್‌ನ ಮಾಹಿತಿಯನ್ನು ಬರೆದಿಟ್ಟುಕೊಳ್ಳಿ.
17. ನಿಮ್ಮ ಹತ್ತಿರ ಯಾವಾಗಲೂ ಒಂದು ಅಧಿವಾದ ಬ್ಯಾಟರಿಯನ್ನು ಮತ್ತು ವೈರ್‌ನ್ನು (ತಂತಿಯನ್ನು) ಇಟ್ಟುಕೊಳ್ಳಿ.

### ಮಾಡಬೇಡಿ!!

**ಶ್ರವಣಯಂತ್ರವನ್ನು ಹೇಗೆ ಇಟ್ಟುಕೊಳ್ಳಬಾರದು**

1. ನಿಮ್ಮ ಶ್ರವಣೋಪಕರಣವನ್ನು ಗಟ್ಟಿಯಾದ ಕ್ಷೇತ್ರದ ಮೇಲೆ ಬೀಳಿಸಬೇಡಿ, ಹೊಡೆಯಬೇಡಿ ಅಥವಾ ಅಪ್ಪಳಿಸಬೇಡಿ.
2. ನಿಮ್ಮ ಶ್ರವಣೋಪಕರಣದ ವೈರನ್ನು ತಿರುಗಿಸುವುದಾಗಲಿ, ಎಳೆಯುವುದಾಗಲಿ ಅಥವಾ ಗಂಟು ಹಾಕುವುದಾಗಲಿ ಮಾಡಬೇಡಿ.



3. ನಿಮ್ಮ ಶ್ರವಣೋಪಕರಣವನ್ನು ಮಳೆಯಲ್ಲಿ ಉಪಯೋಗಿಸಬೇಡಿ.



4. ಮಕ್ಕಳಿಗೆ ಮತ್ತು ಸಾಕು ಪ್ರಾಣಿಗಳಿಗೆ ಸಿಗುವ ಹಾಗೆ ಶ್ರವಣೋಪಕರಣವನ್ನು ಇಡಬೇಡಿ.
5. ನಿಮ್ಮ ಶ್ರವಣೋಪಕರಣವನ್ನು ಧೂಳು ಮತ್ತು ನೀರಿನಿಂದ ರಕ್ಷಿಸಿ.
6. ನಿಮ್ಮ ಶ್ರವಣೋಪಕರಣವನ್ನು ನೇರವಾದ ಬಿಸಿಲಿಗೆ ಇಡಬೇಡಿ.



7. ನಿಮ್ಮ ಶ್ರವಣೋಪಕರಣವನ್ನು ಅತಿಯಾದ ತಾಪಮಾನಕ್ಕೆ ಇಡಬೇಡಿ.
8. ಶ್ರವಣೋಪಕರಣವನ್ನು ಅದರ ವೈರಿನಿಂದ/ತಂತಿಯಿಂದ ನೇತು ಹಾಕಬೇಡಿ. ಏಕೆಂದರೆ ಇದರಿಂದ ವೈರಿಗೆ ಮತ್ತು ರೀಸಿವರ್‌ಗೆ ಒತ್ತಡವು ಬೀಳುತ್ತದೆ.
9. ಶ್ರವಣೋಪಕರಣವನ್ನು ಹೆಚ್ಚಿನ ತಾಪಮಾನವಿರುವ ಸ್ಥಳದಲ್ಲಿ ಅಥವಾ ಎಲೆಕ್ಟ್ರಾನಿಕ್ ಸಾಧನಗಳ ಹತ್ತಿರ ಇಡಬೇಡಿ.
10. ಕಿವಿ  ಅಚ್ಚು ಕಸ ಅಥವಾ ಗುಗ್ಗೆಯಿಂದ ಮುಚ್ಚದಂತೆ ನೋಡಿಕೊಳ್ಳಿ.
11. ಮುರಿದ ಅಥವಾ ಸಡಿಲವಾದ ಸ್ವಿಚ್‌ಗಳನ್ನು ಅಥವಾ ಇತರೆ ಎಲೆಕ್ಟ್ರಾನಿಕ್ ತೊಂದರೆಗಳನ್ನು ನೀವೇ ರಿಪೇರಿ ಮಾಡಲು ಪ್ರಯತ್ನಿಸಬೇಡಿ.
12. ಶ್ರವಣೋಪಕರಣವನ್ನು ಅಥವಾ ಕಿವಿಯಚ್ಚನ್ನು ಪ್ರಬಲ ರಾಸಯನಿಕ ಪದಾರ್ಥಗಳ ಹತ್ತಿರ ಇಡಬೇಡಿ.
13. ಗ್ಂತಿಯನ್ನು ಶ್ರವಣೋಪಕರಣದ ಸುತ್ತ ಗಟ್ಟಿಯಾಗಿ ಸುತ್ತಬೇಡಿ.



14. ಶ್ರವಣೋಪಕರಣವನ್ನು ಬಹಳ ಹೊತ್ತು ಉಪಯೋಗಿಸದಿದ್ದಲ್ಲಿ ಬ್ಯಾಟರಿಯನ್ನು ಹೊರಗೆ ತೆಗದಿಡಿ.
15. ಸೋರುತ್ತಿರುವ ಬ್ಯಾಟರಿಯನ್ನು ಶ್ರವಣೋಪಕರಣದೊಳಗೆ ಬಿಟ್ಟು ಬಿಡಬೇಡಿ.
16. ನಿಮ್ಮ ಕಿವಿಯ ಅಚ್ಚನ್ನು ಕಿವಿಯಿಂದ ಹೊರಗೆ ತೆಗೆಯಲು ತಂತಿ ಅಥವಾ ಟ್ಯೂಬನ್ನು ಹಿಡಿದು ಎಳೆಯಬೇಡಿ.
17. ನಿಮ್ಮ ಶ್ರವಣೋಪಕರಣವನ್ನು ಕಿವಿ ಸೋರುವಾಗ ಉಪಯೋಗಿಸಬೇಡಿ.
18. ನಿಮ್ಮ ಶ್ರವಣೋಪಕರಣವು ತೇವವಾದಲ್ಲಿ ಅದನ್ನು ಬಿಸಿ ಮಾಡುವುದು, ಸೂರ್ಯನ ಬೆಳಕಿನಲ್ಲಿಡುವುದು, ಮೈಕ್ರೋ ವೇವ್‌ನಲ್ಲಿಡುವುದನ್ನು ಮಾಡಬೇಡಿ. ಇದರಿಂದ ಇನ್ನು ಹೆಚ್ಚು